ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 3, July-August 2024, Pp. 1-10
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಮಠದ ಹೋರಿ : ಸಮಕಾಲೀನ ಸಂವೇದನೆಗಳು

**ಡಾ. ವಿಜಯ ಕುಮಾರ್ ಎಚ್. ಜಿ**
ಸಹಾಯಕ ಪ್ರಾಧ್ಯಾಪಕರು, ಡಾ. ಎಂ. ಚಿದಾನಂದಮೂರ್ತಿ ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.

***Abstract:***
*ಹನುಮಂತ ಹಾಲಗೇರಿ 21ನೇ ಶತಮಾನದ ಪ್ರಸಿದ್ಧ ದಲಿತ ಕಥೆಗಾರರಲ್ಲಿ ಒಬ್ಬರು. ಇವರ ಕಥೆಗಳು ಕಾಲ್ಪನಿಕವಾಗಿರದೆ ಅನುಭವ ಕಥೆಗಳಾಗಿವೆ. ಇವರ ಕೆಂಗುಲಾಬಿ ಕಾದಂಬರಿ ದೇವದಾಸಿ ಪದ್ಧತಿಯ ಕರಾಳ ಮುಖದ ವಾಸ್ತವ ಚಿತ್ರಣದೊಂದಿಗೆ ಹೆಚ್ಚು ಚರ್ಚೆಗೆ ಒಳಗಾಗಿದೆ. ಹಾಗೆಯೇ ಇವರ ಮಠದ ಹೋರಿ ಕಥಾಸಂಕಲನವೂ ಸಹ ಈ ಸಾಲಿಗೆ ಸೇರುತ್ತದೆ. ಹಾಲಗೇರಿ ಅವರು ಕಥೆಗಾರರಾಗಿ, ಪತ್ರಕರ್ತರಾಗಿ, ಸಾಮಾಜಿಕ ಹೋರಾಟಗಾರರಾಗಿಯೂ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಹಳ್ಳಿಯ ಬಡತನ, ಜಾತಿ–ಮತ, ಕೋಮುವಾದ, ಸ್ತ್ರೀ ದೌರ್ಜನ್ಯ ಮುಂತಾದವುಗಳ ಬಗ್ಗೆ ಒಟ್ಟು ಹತ್ತು ಕಥೆಗಳಿವೆ. ಉತ್ತರ ಕರ್ನಾಟಕದ ಭಾಷೆ ಮತ್ತು ಸತ್ವ ಈ ಕತೆಗಳ ವಿಶೇಷವಾಗಿದೆ.*

***Keywords:*** *ಕನ್ನಡ ಸಾಹಿತ್ಯ, ದಲಿತ ಸಾಹಿತ್ಯ, ಹನುಮಂತ ಹಾಲಗೇರಿ, ಮಠದ ಹೋರಿ, ಕೆಂಗುಲಾಬಿ.*

**ಪೀಠಿಕೆ**

ಹಾಲಗೇರಿಯವರ ಮಠದ ಹೋರಿ 10 ಕಥೆಗಳನ್ನು ಒಳಗೊಂಡ ಕಥಾಸಂಕಲನ. ಇಲ್ಲಿನ ಕಥೆಗಳೆಲ್ಲವೂ ಆಧುನೀಕರಣದಿಂದ ಗ್ರಾಮೀಣ ಬದುಕಿನಲ್ಲಾದ ಪಲ್ಲಟಗಳನ್ನು ಸೆರೆ ಹಿಡಿದಿವೆ. ಇದರ ಜೊತೆಗೆ ಬದಲಾದ ಈ ಹೊಸ ಶತಮಾನದಲ್ಲಿ ದಲಿತರ ಬದುಕು, ಹೋರಾಟದ ಹಾದಿ ಎತ್ತಕಡೆ ಸಾಗುತ್ತಿವೆ ಎಂಬುದನ್ನು ಸೂಕ್ಷ್ಮವಾಗಿ ಗುರುತಿಸಿದ್ದಾರೆ. ಹಾಲಗೇರಿಯವರ ಕಥೆಗಳಲ್ಲಿ ಬಾಗಲಕೋಟೆಯ ದಟ್ಟ ಪ್ರಾದೇಶಿಕತೆಯನ್ನು ಗುರುತಿಸಬಹುದು. ಅಲ್ಲಿನ ಭಾಷೆ, ಸಂಸ್ಕೃತಿ, ಜೀವನ ವಿಧಾನ, ಉಡುಗೆ–ತೊಡುಗೆ, ಆಚಾರ–ವಿಚಾರ, ನಂಬಿಕೆ ಮುಂತಾದ ಹಲವು ವಿಷಯಗಳು ಇವರ ಕಥೆಗೆ ಜೀವತುಂಬಿ ಪ್ರಾಣ ಪ್ರತಿಷ್ಠಾಪಿಸಿವೆ. ಇವುಗಳ ಜೊತೆಗೆ ವರ್ತಮಾನದ ಸಮಸ್ಯೆಗಳನ್ನ ತಮ್ಮ ಕಥೆಯ ವಸ್ತುಗಳಾಗಿ ಬಳಸಿಕೊಂಡಿರುವುದರಿಂದ ಇವರ ಕಥೆಗಳು ಹೊಸ ಶತಮಾನದ ಹೊಸ ಸಂವೇದನೆಗಳನ್ನು ಸಮರ್ಥವಾಗಿ ಧ್ವನಿಸುತ್ತವೆ. ಇವರ ಕಥೆಗಳಲ್ಲಿ ಬರುವ ಸನ್ನಿವೇಶಗಳು ದಿನನಿತ್ಯ ನಮ್ಮ ಕಣ್ಣ ಮುಂದೆ ನಡೆಯುವಂತಹವುಗಳು. ಕಥೆಗಳಲ್ಲಿ ಬರುವ ಪಾತ್ರಗಳೂ ಅಷ್ಟೇ, ನಮ್ಮ ದೈನಂದಿನ ಆಪ್ತೇಸ್ವರೇ ಆಗಿರುತ್ತಾರೆ.

ಹಾಲಗೇರಿಯವರ ಬಹುತೇಕ ಕಥೆಗಳು ಗ್ರಾಮೀಣ ಬದುಕಿನಲ್ಲಾಗುತ್ತಿರುವ ಪಲ್ಲಟಗಳನ್ನು ಕುರಿತು ಮಾತನಾಡುತ್ತವೆ. ಈ ಪಲ್ಲಟಗಳಿಗೆ ಕಾರಣಗಳನ್ನು ಗುರುತಿಸುತ್ತವೆ. ಆದರೆ ಪ್ರಸ್ತುತ ವರ್ತಮಾನದಲ್ಲಿ ಈ ಪಲ್ಲಟಗಳನ್ನು ಎದುರಿಸಲಾಗದೆ,

***Please cite this article as:*** ವಿಜಯ ಕುಮಾರ್ ಎಚ್.ಜಿ. (2024). ಮಠದ ಹೋರಿ: ಸಮಕಾಲೀನ ಸಂವೇದನೆಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 3(3), 1–10

ಪ್ರತಿಭಟಿಸಲಾಗದೆ, ಅವುಗಳೊಂದಿಗೆ ಹೊಂದಾಣಿಕೆಯ ರಾಜಿ ಮಾಡಿಕೊಂಡು, ಬದುಕು ಸಾಗಿಸುವ ಗ್ರಾಮೀಣರ ಚಿತ್ರಣಗಳು ಕಥೆಯ ಅಂತ್ಯದಲ್ಲಿ ಕಾಣಸಿಗುತ್ತವೆ. ಆಧುನಿಕತೆ ಈ ಶತಮಾನದ ಸೌಹಾರ್ದಯುತ, ಸಾಮರಸ್ಯದ, ಸಹಬಾಳ್ವೆಯನ್ನು ಕಿತ್ತುಕೊಂಡು, ಆತಂಕ ತಲ್ಲಣಗಳ ನಡುವೆ ಬದುಕು ಸವೆಸುವಂತಹ ಸಂಧಿಗ್ಧತೆಗಳನ್ನು ನಿರ್ಮಿಸಿರುವುದನ್ನು ಹಾಲಗೇರಿಯವರ ಕಥೆಗಳು ಚಿತ್ರಿಸುತ್ತವೆ. ಇವರ ಕಥೆಗಳನ್ನು ಮುಖ್ಯವಾಗಿ ನಾಲ್ಕು ನೆಲೆಯಲ್ಲಿ ವಿಶ್ಲೇಷಿಸಬಹುದು. ಜಾತಿಯ ನೆಲೆ, ಅಭಿವೃದ್ಧಿ ನೆಲೆ, ಧಾರ್ಮಿಕ ನೆಲೆ, ಸಾಂಸ್ಕೃತಿಕ ನೆಲೆ ಎಂಬುದಾಗಿ ವಿಭಾಗಿಸಿಕೊಳ್ಳಬಹುದು.

ಹಾಲಗೇರಿ ಅವರು ಉತ್ತರ ಕರ್ನಾಟಕದ ತೀರಾ ಹಿಂದುಳಿದ ಜಿಲ್ಲೆಯ ದಮನಿತ ಸಮುದಾಯದಿಂದ ಬಂದವರು. ಹಾಗಾಗಿ ಅವರ ಕಥೆಗಳು ಸಮಕಾಲೀನ ದಲಿತ ಸಮುದಾಯದ ಸಂವೇದನೆಗಳನ್ನು ಅತ್ಯಂತ ಸಮರ್ಥವಾಗಿ ನಿರೂಪಿಸಲು ಸಾಧ್ಯವಾಗಿದೆ. ಕಳೆದ ಶತಮಾನದ 70–80–90ರ ದಶಕದ ದಲಿತ ಸಮುದಾಯದ ಶೋಷಣೆ, ಪ್ರತಿಭಟನೆ, ಹೋರಾಟಗಳ ಸ್ವರೂಪವೇ ಬೇರೆ. ಇಂದಿನ ಹೊಸ ಶತಮಾನದ ದಲಿತರ ಸಂವೇದನೆಗಳೇ ಬೇರೆ. ಕಳೆದ ಶತಮಾನದಲ್ಲಿ ಮೊದಲ ತಲೆಮಾರಿನ ದಲಿತರು ಶಿಕ್ಷಣ ಕ್ಷೇತ್ರಕ್ಕೆ ಕಾಲಿಟ್ಟು ಶೋಷಣೆಯ ವಿರುದ್ಧ ಪ್ರತಿಭಟಿಸಿದವರು. ಕಾನೂನಿನ ಅಡಿಯಲ್ಲಿ ತಮಗೆ ರಕ್ಷಣೆ ಇದೆ ಎಂದು ಜಾಗೃತರಾಗಿ ಅನಕ್ಷರಸ್ಥ ಸಮುದಾಯಗಳಿಗೂ ಈ ಜಾಗೃತ ಪ್ರಜ್ಞೆಯನ್ನು ವಿಸ್ತರಿಸಿದವರು. 21ನೇ ಶತಮಾನದಲ್ಲಿ ಬಹುತೇಕ ದಲಿತರು ಅಕ್ಷರಸ್ಥರಾಗಿದ್ದು, ತಮ್ಮ ರಕ್ಷಣೆಯ ಕಾನೂನುಗಳನ್ನು ತಿಳಿದವರು. ಕಳೆದ ಶತಮಾನಕ್ಕೆ ಹೋಲಿಸಿದರೆ ಈ ಶತಮಾನದಲ್ಲಿ ಜಾತಿಯ ದೌರ್ಜನ್ಯಗಳು ಸ್ವಲ್ಪ ಮಟ್ಟಿಗೆ ಕಡಿಮೆಯಾಗಿವೆ ಎಂದು ಭಾವಿಸಬಹುದು. ಆದರೆ ದಲಿತರ ಮೇಲಿನ ಶೋಷಣೆಗಳು ಸಂಪೂರ್ಣವಾಗಿ ನಿಂತು ಹೋಗಿರುವುದಿಲ್ಲ. ಇಂದಿನ ದಲಿತ ಸಮುದಾಯಗಳು ಶೋಷಣೆಗಳ ವಿರುದ್ಧ ಕಾನೂನಿನ ಮೊರೆ ಹೋಗಿ ರಕ್ಷಣೆ ಪಡೆಯುತ್ತಿದ್ದಾರೆ. ಶೋಷಕ ವರ್ಗಗಳು ಇಂದು ನ್ಯಾಯಾಂಗ ವ್ಯವಸ್ಥೆಗೆ ಹೆದರಿಕೊಂಡು ಕೂತಿವೆ. ದಲಿತರು ಸಂಘಟಿತರಾಗಿದ್ದು ಶೋಷಣೆಯ ವಿರುದ್ಧ ಒಗ್ಗಟ್ಟಾಗಿ ಸಂಘ–ಸಂಸ್ಥೆಗಳ ಮೂಲಕ, ಪ್ರತಿಭಟನೆ ಹೋರಾಟಗಳ ಮೂಲಕ, ಶೋಷಕ ವರ್ಗಗಳ ದಬ್ಬಾಳಿಕೆಯನ್ನು ಹತ್ತಿಕ್ಕಿವೆ.

'ಮೂಕದ್ಯಾವ್ರು', 'ಕೇರಿಯ ಗಾಯಕ್ಕೆ ಕೆಂಡದ ಮುಲಾಮು', 'ಡ್ಯೆರಿ ಹಾಲಿಗೆ ಹುಳಿ ಬಿತ್ತು', 'ಸಂವಿಧಾನ ಮತ್ತು ರಣಹದ್ದು' ಕಥೆಗಳು ಜಾತಿ ವ್ಯವಸ್ಥೆ ಕೇಂದ್ರವಾಗಿರುವಂತಹ ಕಥೆಗಳು. ನಗರ ಜೀವನದಲ್ಲಿ ಇಂದು ಜಾತಿ ವ್ಯವಸ್ಥೆ ಅಷ್ಟೊಂದು ಮುಖ್ಯ ಸಮಸ್ಯೆಯಾಗಿ ಕಾಣಿಸಿಕೊಳ್ಳುವುದಿಲ್ಲ. ಗ್ರಾಮೀಣ ಪ್ರದೇಶದಲ್ಲಿ ಇಂದಿಗೂ ಇದರ ಕರಿನೆರಳಿನಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಿಲ್ಲ. ಎಷ್ಟೇ ವಿದ್ಯಾವಂತರಾದರು ವೈಚಾರಿಕತೆ, ವೈಜ್ಞಾನಿಕತೆ, ಆಧುನಿಕತೆಗಳಿಗೆ ತಮ್ಮನ್ನು ತಾವು ಎಷ್ಟೇ ತೊಡಗಿಸಿಕೊಂಡರೂ ಜಾತಿಯ ಸಂಕೋಲೆಗಳಿಂದ ಬಿಡುಗಡೆ ದೊರೆತಿಲ್ಲ. ಗ್ರಾಮೀಣ ಭಾಗದಲ್ಲಿ ಈಗಲೂ ಇದು ಬೂದಿ ಮುಚ್ಚಿದ ಕೆಂಡದಂತೆ ಗೌಣವಾಗಿರುವುದನ್ನು ಹಾಲಗೇರಿ ಅವರ ಕಥೆಗಳು ವ್ಯಕ್ತಪಡಿಸುತ್ತವೆ.

'ಮೂಕದ್ಯಾವ್ರು' ಕಥೆಯಲ್ಲಿ ದಲಿತ ಸಂಗೀತಗಾರನೊಬ್ಬನ ದುರಂತ ಬದುಕಿನ ಚಿತ್ರಣವಿದೆ. ಪ್ರತಿಭೆ ಯಾರ ಸ್ವತ್ತಲ್ಲ, ಕಲಿತವರ ಸ್ವತ್ತು. ಪ್ರತಿಭೆಗೆ ಯಾವ ಜಾತಿ ಕುಲಗಳ ಹಂಗಿಲ್ಲ. ದಲಿತರ ಶೇಷ್ಯಾ ಬಾಲ್ಯದಿಂದ ತತ್ವಪದಗಳನ್ನು ಕೇಳುತ್ತಾ ಹಾಡುತ್ತಾ ಬೆಳೆದವನು. ಪರ ಊರಿನಲ್ಲಿ ಮೇಲ್ವರ್ಗದ ಭಜನೆ ಮೇಳಗಳು ನಡೆದಾಗ ಸ್ಟೇಜ್ ಹತ್ತಿ ಹಾಡಿ ಎಲ್ಲರಿಂದಲೂ ಪ್ರಶಂಸೆ ಪಡೆದು ಗ್ರಾಮದ ಗೌರವಕ್ಕೆ ಕಾರಣನಾದನು. ಆದರೆ ಸ್ವಂತ ಊರಿನಲ್ಲಿ ಶೇಷ್ಯಾನಿಗೆ ಆ ಗೌರವ ಸ್ಥಾನ ಸಿಗುವುದಿಲ್ಲ. ಏಕೆಂದರೆ ಶೇಷ್ಯಾ ದಲಿತನಾಗಿದ್ದ ಕಾರಣದಿಂದ ಅವನ ಪ್ರತಿಭೆಗೆ ತಕ್ಕ ಪುರಸ್ಕಾರಗಳು ದೊರೆಯುವುದಿಲ್ಲ. ಇದನ್ನು

ಪ್ರಶ್ನಿಸಿದ್ದಕ್ಕಾಗಿ ಊರಿನ ಮೇಲ್ವರ್ಗದವರಿಗೂ, ಪ್ರಗತಿಪರ ದಲಿತ ಯುವಕರ ನಡುವೆ ಮನಸ್ತಾಪ ಗಲಾಟೆಗಳಾಗಿ ಶೇಷ್ಯಾ ಬದುಕಿ ಉಳಿದಿದ್ದು ಹೆಚ್ಚು ಅನ್ನುವ ಹಾಗಾಗುತ್ತದೆ. ಇಂದು ನಗರ ಭಾಗದಲ್ಲಿ ಪ್ರತಿಭಾವಂತರಿಗೆ ಜಾತಿ ಸಮಸ್ಯೆಯಾಗಿ ಕಾಡುವುದಿಲ್ಲ. ಆದರೆ ಗ್ರಾಮೀಣ ಭಾಗದ ಸಂಪ್ರದಾಯಬದ್ಧ ಮನಸ್ಥಿತಿಗಳು ಇನ್ನೂ ಬದಲಾಗಿಲ್ಲ. ಅಲ್ಲಿ ಇನ್ನೂ ಜಾತಿ ವ್ಯವಸ್ಥೆ ಆಚರಣೆಯಲ್ಲಿದೆ. ದಲಿತರು ಯಾವುದೇ ಕ್ಷೇತ್ರದಲ್ಲಿ ಪ್ರತಿಭಾವಂತರೆನಿಸಿಕೊಂಡರೂ ಸಹ ಜಾತಿಯ ಕಾರಣಕ್ಕೆ ಅವರು ನಿರ್ಲಕ್ಷಕ್ಕೆ ಒಳಗಾಗುತ್ತಾರೆ. ಇದು ಎಲ್ಲಾ ಗ್ರಾಮಗಳಲ್ಲಿ ಕಾಣಬರುವ ಸಾಮಾನ್ಯ ದೃಶ್ಯ. ಇದನ್ನು ಹಾಲಗೇರಿ ಅವರು ತಮ್ಮ ಕಥೆಯಲ್ಲಿ ಮನೋಜ್ಞವಾಗಿ ಚಿತ್ರಿಸಿದ್ದಾರೆ. ಈ ಕಥೆಯ ಎರಡನೇ ಭಾಗದಲ್ಲಿ ಇದಕ್ಕೆ ಸಾಂಸ್ಕೃತಿಕ ಪ್ರತಿರೋಧವನ್ನು ಒಡ್ಡಿರುವುದನ್ನು ಗಮನಿಸಬಹುದು.

ದಲಿತ ಕೇರಿಯ ಜನ ಮೇಲ್ವರ್ಗದ ಬಸವಣ್ಣ ದೇವರಿಗೆ ಪ್ರತಿಯಾಗಿ ದಲಿತರ ಶೇಷ್ಯಾನ ನೇತೃತ್ವದಲ್ಲಿ ದುರ್ಗವ್ವ ಮರುಗವ್ವ ದೇವತೆಯರ ಆರಾಧನೆ ಪ್ರಾರಂಭಿಸುವರು. ಮೇಲ್ವರ್ಗದ ಭಜನಾ ಮೇಳಕ್ಕೆ ಪ್ರತಿಯಾಗಿ ದಲಿತ ಕೇರಿಯವರು ಭಜನಾ ಮೇಳವನ್ನು ಕಟ್ಟುವರು. ಮೇಲ್ವರ್ಗದ ಬಸವನ ದೇವರ ಎತ್ತಿಗೆ ಪ್ರತಿಯಾಗಿ ದಲಿತರು ಆಕಳ ಮಣಕವನ್ನು ದೇವರ ಎತ್ತಾಗಿ ಬಳಸಿಕೊಳ್ಳುವುದು ಪರ್ಯಾಯ ಸಂಸ್ಕೃತಿಯ ಪ್ರತೀಕವಾಗಿದೆ. 21ನೇ ಶತಮಾನದಲ್ಲಿ ಮೇಲ್ವರ್ಗಗಳು ಸಾಂಸ್ಕೃತಿಕ, ಧಾರ್ಮಿಕ ಕ್ಷೇತ್ರಗಳಿಂದ ದಲಿತ ಸಮುದಾಯವನ್ನು ಹೊರಗಿಟ್ಟರೆ, ಆ ಮೇಲ್ವರ್ಗಗಳ ಸಂಸ್ಕೃತಿಗೆ ಪರ್ಯಾಯವಾಗಿ ದಲಿತರು ತಮ್ಮ ಸಂಸ್ಕೃತಿಯನ್ನು ರೂಪಿಸಿಕೊಳ್ಳುವುದನ್ನು ಕಥೆಯಲ್ಲಿ ವ್ಯಕ್ತಪಡಿಸಲಾಗಿದೆ. ಮನುಷ್ಯನಿಗೆ ಜಾತಿ ಧರ್ಮಗಳ ಬಂಧನವಿದೆ. ಪ್ರಾಣಿಗಳಿಗೆ ಇದರ ಯಾವ ಗೊಡವೆಯೂ ಇರುವುದಿಲ್ಲ. ಕಥೆಯ ಕೊನೆಯಲ್ಲಿ ದಲಿತ ಸಮುದಾಯದ ದೈವವಾದ ಆಕಳ ಮಣಕದೊಂದಿಗೆ ಮೇಲ್ವರ್ಗದವರ ದೈವವಾದ ಬಸವ ಓಡಿಹೋಗಿ ಪ್ರಣಯದಲ್ಲಿ ತೊಡಗುವುದು. ಇವುಗಳ ಪ್ರಣಯ ಜಾತಿಯ ಸಂಕೋಲೆಯನ್ನು ಮೀರುವ ಕ್ರಿಯೆಯಾಗಿದೆ. ದಲಿತ ಸಮುದಾಯ ಇಂದು ಶಿಕ್ಷಣ ಪಡೆದು ಜಾಗೃತರಾಗಿರುವುದಷ್ಟೇ ಅಲ್ಲ, ತಮ್ಮನ್ನು ಯಾವ ಸಂಸ್ಕೃತಿಯ ಅಂಶಗಳು ಸಮಾಜದ ಇತರ ವರ್ಗಗಳಿಗಿಂತ ಕೀಳು ಎಂದು ವಿಭಾಗಿಸಿವೆಯೋ, ಅಂತಹ ಕ್ಷೇತ್ರಗಳಲ್ಲಿ ತಾವು ಕೂಡ ಶ್ರೇಷ್ಠರೇ ಎಂದು ಸಾಬೀತುಪಡಿಸಿಕೊಳ್ಳಲು ಈ ರೀತಿಯ ಪರ್ಯಾಯಗಳನ್ನು ಸೃಷ್ಟಿಸಿಕೊಳ್ಳುತ್ತಿದ್ದಾರೆ.

'ಕೇರಿಯ ಗಾಯಕ್ಕೆ ಕೆಂಡದ ಮುಲಾಮು' ಎಂಬ ಕತೆ ದಲಿತರು, ದಲಿತ ನಾಯಕರಿಂದಲೇ ಹೇಗೆ ವಂಚಿತರಾಗುತ್ತಿದ್ದಾರೆ ಎಂಬ ವಾಸ್ತವಂಶವನ್ನು ಕಥಾವಸ್ತುವಾಗಿ ಹೊಂದಿದೆ. ಇಂದು ಕೆಲವು ದಲಿತ ಮುಖಂಡರುಗಳು ತಮ್ಮ ಸ್ವಾರ್ಥಕ್ಕೆ, ದುರಾಸೆಗೆಗಳಿಗೆ ಇಡೀ ಸಮುದಾಯವನ್ನು ಬಲಿ ಕೊಡುತ್ತಿರುವ ಹಲವಾರು ಪ್ರಕರಣಗಳನ್ನು ಗಮನಿಸಬಹುದು. ಕಳೆದ ಶತಮಾನದಲ್ಲಿ ದಲಿತ ಮುಖಂಡರುಗಳು ಮೊದಲ ತಲೆಮಾರಿನ ಅಕ್ಷರಸ್ಥರು ಹಾಗೂ ಹೋರಾಟಗಾರರಾಗಿದ್ದರು. ಅವರಿಗೆ ತಮ್ಮ ಶೋಷಿತ ಸಮುದಾಯಗಳ ಬಗ್ಗೆ ಅಪಾರ ಕಾಳಜಿ, ಕಳಕಳಿ ಅನುಕಂಪಗಳಿದ್ದವು. ಹಾಗಾಗಿ ಸಮುದಾಯದ ಹಿತಕ್ಕೆ ತಮ್ಮನ್ನು ತಾವು ಅರ್ಪಿಸಿಕೊಳ್ಳುತ್ತಿದ್ದರು. 21ನೇ ಶತಮಾನದ ಕೆಲವು ದಲಿತ ಮುಖಂಡರು ಈ ಬಗೆಯ ಯಾವ ಕಾಳಜಿ, ಕಳಕಳಿಗಳೂ ಉಳಿದಿಲ್ಲ. ಅವರಲ್ಲಿನ ಮಾನವೀಯತೆಯು ಸ್ವಾರ್ಥವಾಗಿ ಬದಲಾಗಿದೆ. ಹಾಗಾಗಿ ತಮ್ಮವರನ್ನೇ ಬಲಿಕೊಟ್ಟು ತಾವು ಮೇಲೆ ಬರುವ ಸಂಸ್ಕೃತಿಯನ್ನು ರೂಢಿಸಿಕೊಳ್ಳುತ್ತಿದ್ದಾರೆ. ಈ ಕಥೆಯಲ್ಲಿ ಬರುವ ಚನ್ನಪ್ಪನೆಂಬ ದಲಿತ ಮುಖಂಡ, ಪಟ್ಟಣದಲ್ಲಿ ದಲಿತ ಸಂಘಟನೆ ಸ್ಥಾಪಿಸಿಕೊಂಡು ಹಲವು ಸಾಮಾಜಿಕ ಹೋರಾಟಗಳಲ್ಲಿ ಗುರುತಿಸಿಕೊಂಡವನು. ಒಮ್ಮೆ ಊರಿಗೆ ಬಂದಾಗ ಊರಿನ ಒಂದು ಕಾರ್ಯಕ್ರಮದಲ್ಲಿ ಸ್ಟೇಜ್ ಹತ್ತಿ, ಮೇಲ್ವರ್ಗದಿಂದ

ಹಲ್ಲೆಗೆ ಒಳಗಾಗುವನು. ಚೆನ್ನಪ್ಪ ಊರಿನಲ್ಲಿ ಕೆಲವು ವಿದ್ಯಾವಂತ ಯುವಕರ ತಂಡ ಕಟ್ಟಿಕೊಂಡು ಮೇಲ್ವರ್ಗದ ವಿರುದ್ಧ ಹೋರಾಟ ಮಾಡಲು ಪ್ರೇರೇಪಿಸುವನು. ಮೇಲ್ವರ್ಗದವರ ಮೇಲೆ ಅಟ್ರಾಸಿಟಿ ಕೇಸ್ ದಾಖಲಿಸಲು ಮುಂದಾಗುವನು. ಈ ಹಂತದಲ್ಲಿ ಮೇಲ್ವರ್ಗದ ಯುವಕರು ರಾತ್ರೋರಾತ್ರಿ ದಲಿತರ ಮೇಲೆ ಹಲ್ಲೆ ನಡೆಸುವರು. ಹಲ್ಲೆಗೆ ಒಳಗಾದ ದಲಿತರು ತೀವ್ರತರ ಗಾಯಗಳಿಂದ ಆಸ್ಪತ್ರೆಗೆ ದಾಖಲಾಗಬೇಕಾಗುತ್ತದೆ. ಚೆನ್ನಪ್ಪ ತನ್ನ ಶಕ್ತಿ ಬಳಸಿ ಪತ್ರಿಕೆಗಳಲ್ಲಿ ಇದನ್ನು ದೊಡ್ಡ ಸುದ್ದಿಯಾಗಿ ಮಾಡಿಸಿ, ನೊಂದ ದಲಿತರಿಗೆ ನ್ಯಾಯ ಕೊಡಿಸಲು ಹೋರಾಡುವನು. ಕೊನೆಗೆ ಸರ್ಕಾರದ ಗಮನ ಸೆಳೆದು ಹಲ್ಲೆಗೊಳಗಾದ ದಲಿತರಿಗೆ ಪರಿಹಾರ ಕೊಡಿಸುವ ನೆಪದಲ್ಲಿ ತನ್ನ ಶ್ರಮನ್ನೆ ಮುಂದೆ ಮಾಡಿ ಪರಿಹಾರದ ಬಹುಪಾಲು ಹಣ ತನ್ನಲ್ಲೇ ಇಟ್ಟುಕೊಂಡು ಚೂರುಪಾರು ಹಣವನ್ನು ನೊಂದವರಿಗೆ ಪರಿಹಾರವಾಗಿ ನೀಡುವನು. ಇಲ್ಲಿ ಹಲ್ಲೆಗೊಳಗಾದ ದಲಿತರು ಪರಿಹಾರದ ಹಣವೂ ಇಲ್ಲದೆ, ಗ್ರಾಮಗಳಲ್ಲಿ ಕೂಲಿ ಕಂಬಳಿ ಸಿಗದೇ ಮತ್ತಷ್ಟು ಜರ್ಜರಿತರಾಗಿರುವುದನ್ನು ಕಥೆಯು ಧ್ವನಿಸುತ್ತದೆ. ಇದು ಇಂದಿನ ಹಲವು ಗ್ರಾಮಗಳಲ್ಲಿ ನಡೆಯುವ ಸಾಮಾನ್ಯ ಸಂಗತಿಯಾಗಿದೆ. ವಿದ್ಯಾವಂತ ದಲಿತ ಮುಖಂಡರು ನಗರಗಳಲ್ಲಿ ಸಂಘ–ಸಂಸ್ಥೆಗಳನ್ನು ಸ್ಥಾಪಿಸಿಕೊಂಡು ಗ್ರಾಮೀಣ ಭಾಗದ ಶೋಷಿತ ದಲಿತ ಸಮುದಾಯಗಳನ್ನು ಈ ರೀತಿ ವಂಚಿಸುತ್ತಾ ಬರುತ್ತಿವೆ. ಈ ಬಗೆಯ ವಂಚಕ ಮುಖಂಡರಲ್ಲಿ ಯಾವ ಬಗೆಯ ಸೈದ್ಧಾಂತಿಕ ನಿಲುವುಗಳೂ ಇರುವುದಿಲ್ಲ ಎಂಬುದು ಈ ಕಥೆಯಲ್ಲಿ ನಿರೂಪಿತವಾಗಿದೆ.

'ಡೈರಿ ಹಾಲಿಗೆ ಹುಳಿ ಬಿತ್ತು' ಎಂಬ ಕಥೆಯೂ ಸಹ ಜಾತಿ ವ್ಯವಸ್ಥೆಯನ್ನೇ ಕೇಂದ್ರವಾಗಿ ಹೊಂದಿರುವ ಮತ್ತೊಂದು ಕಥೆ. ಗ್ರಾಮಕ್ಕೆ ಹಾಲಿನ ಡೈರಿ ಪಾಯಿಂಟ್ ಬಂದಾಗ ಮೇಲ್ವರ್ಗದ ಬಸವಣ್ಯಪ್ಪ ತನ್ನ ಮನೆಯಲ್ಲಿ ಡೈರಿ ಸ್ಥಾಪನೆಯಾಗುವಂತೆ ನೋಡಿಕೊಳ್ಳುತ್ತಾನೆ. ಇದರಿಂದ ಅಸಮಾಧಾನಗೊಂಡ ಕೆಳ ವರ್ಗದವರು ತಮ್ಮ ಕೇರಿಯಲ್ಲಿ ಡೈರಿ ಸ್ಥಾಪಿಸಲು ಪಟ್ಟು ಹಿಡಿಯುತ್ತಾರೆ. ಮೇಲ್ವರ್ಗದವರಿಗೆ ತಮಗಿಂತ ಕೆಳಸ್ಥರದ ಜನರ ಕೇರಿಗೆ ಹೋಗಿ ಹಾಲು ಹಾಕಲು ಅವರ ಕುಲ–ಮತ ಪ್ರತಿಷ್ಠೆಗಳು ಅಡ್ಡ ಬರುತ್ತವೆ. ಕೆಳವರ್ಗದ ಕೆಲ ವಿದ್ಯಾವಂತ ಪ್ರಗತಿಪರ ಯುವಕರಿಗೆ ಇದು ತಮ್ಮ ಸಮುದಾಯದ ಸ್ವಾಭಿಮಾನದ ಪ್ರಶ್ನೆಯಾಗಿ ಏರ್ಪಡುತ್ತದೆ. ಕೆಳಸ್ತರದ ಸಮುದಾಯದ ಯುವಕರಿಗೆ ತಾವು ಮತ್ತೆ ಮೇಲ್ವರ್ಗದ ಮನೆಗಳ ಮುಂದೆ ಸಾಲು ನಿಲ್ಲುವುದು ಇಷ್ಟವಿರುವುದಿಲ್ಲ. ಆದ್ದರಿಂದ ಡೈರಿ ಕಂಪನಿಯವರ ಲಾರಿ ತಡೆದು ಪ್ರತಿಭಟನೆ ಮಾಡುವರು. ಊರ ಗೌಡರ ಕುತಂತ್ರದಿಂದ ಪೊಲೀಸ್ ಸ್ಟೇಷನ್ ಮೆಟ್ಟಿಲು ಹತ್ತಬೇಕಾಗುತ್ತದೆ. ಇದರಿಂದ ಇನ್ನಷ್ಟು ಕುದಿಯ ತೊಡಗಿದ ಕೆಳವರ್ಗದ ಯುವಕರು ಸೇಡು ತೀರಿಸಿಕೊಳ್ಳಲು ಸಮಯ ಕಾಯುವರು. ಕೆಲ ಸಮಯದ ಬಳಿಕ ಡೈರಿ ನಡೆಸುತ್ತಿದ್ದ ಬಸವಣ್ಯಪ್ಪನ ಮಗಳು ಅಕ್ಕಮ್ಮಳನ್ನು ತಳವಾರ ಗೋಪಿ ಪ್ರೀತಿಸಿ ಓಡಿಸಿಕೊಂಡು ಹೋಗುವನು. ಇದರಿಂದ ಗ್ರಾಮದಲ್ಲಿ ಕೋಮು ಸೌಹಾರ್ದತೆ ಹದಗೆಟ್ಟು ಬಿಗುವಿನ ವಾತಾವರಣ ಏರ್ಪಟ್ಟು ಡೈರಿ ಮುಚ್ಚಿ ಹೋಗುವುದು.

ಈ ಕಥೆಯು ವಾಸ್ತವವಾಗಿ ಜಾತಿ ಸಂಘರ್ಷವನ್ನು ಕೇಂದ್ರವಾಗಿ ಹೊಂದಿದ್ದರು, ಬಸವಣ್ಯಪ್ಪನಂತಹ ಮುಂದುವರೆದ ಸಮುದಾಯದವರು, ಗ್ರಾಮಗಳಿಗೆ ಬರುವ ಯಾವುದೇ ಸರ್ಕಾರಿ ಸೌಲಭ್ಯಗಳು ಕೆಳಸ್ಥರದವರಿಗೆ ದಕ್ಕದಂತೆ ಹುನ್ನಾರ ಮಾಡಿ ತಮ್ಮಲ್ಲೇ ಉಳಿಸಿಕೊಳ್ಳುವುದನ್ನು ಸೂಕ್ಷ್ಮವಾಗಿ ವ್ಯಕ್ತಪಡಿಸುತ್ತದೆ. ಸಾಮಾಜಿಕವಾಗಿ, ರಾಜಕೀಯವಾಗಿ ಪ್ರಬಲವಾಗಿರುವ ಸಮುದಾಯಗಳು ಕೆಳವರ್ಗದ ಪ್ರತಿಭಟನೆಯನ್ನು ಸುಲಭವಾಗಿ ಹತ್ತಿಕುತ್ತವೆ. ಇಂದಿನ ಕೆಳಸ್ಥರದವರೂ ಸಹ ತಮ್ಮ ಸ್ವಾಭಿಮಾನವನ್ನು ಪ್ರದರ್ಶಿಸುತ್ತವೆ. ಮೇಲ್ವರ್ಗದವರ ವಂಚನೆಗಳಿಗೆ ಯಾವುದಾದರೂ

ಒಂದು ಬಗೆಯಲ್ಲಿ ಸೇಡು ತೀರಿಸಿಕೊಳ್ಳುತ್ತಲೇ ಇರುತ್ತಾರೆ. ಈ ಮೂಲಕ ಮೇಲ್ವರ್ಗದವರ ಪ್ರತಿಷ್ಠೆಗೆ ಪೆಟ್ಟು ಕೊಡುತ್ತಲೇ ಇರುತ್ತಾರೆ ಎಂಬುದನ್ನು ಕಥೆಯು ಚಿತ್ರಿಸಿದೆ. ಶೀರ್ಷಿಕೆಯೇ ಹೇಳುವಂತೆ ಡೈರಿ ಹಾಲಿಗೆ ಹುಳಿ ಬಿದ್ದರೆ ಹಾಲು ಹಾಳಾಗುವಂತೆ, ಡೈರಿ ಸ್ಥಾಪನೆಗೊಂಡು ಎರಡು ಸಮುದಾಯಗಳ ನಡುವೆ ಹುಳಿಯಾಗಿ ಗ್ರಾಮದ ಸ್ವಾಸ್ಥ್ಯವನ್ನು ಹಾಳು ಮಾಡಿದೆ. ಅಂತರ್ಜಾತಿ ಪ್ರೇಮ ವಿವಾಹಗಳು ಇಂದು ನಗರದಲ್ಲಷ್ಟೇ ಅಲ್ಲದೆ ಗ್ರಾಮೀಣ ಪ್ರದೇಶದಲ್ಲಿ ಸರ್ವೇಸಾಮಾನ್ಯವಾಗಿದೆ.

'ಸಂವಿಧಾನ ಮತ್ತು ರಣಹದ್ದು' ಎಂಬ ಕಥೆಯು ರಾಜಕೀಯದ ಚದುರಂಗದಾಟಕ್ಕೆ ಸಿಕ್ಕ ದಲಿತ ಹುಡುಗನೊಬ್ಬನ ಕಥೆಯನ್ನು ಸಾದರಪಡಿಸಿದೆ. ರಾಜಕೀಯ ನಾಯಕರು ತಮ್ಮ ಅವಶ್ಯಕತೆಗಳಿಗೆ ಅನುಗುಣವಾಗಿ ಸ್ವಾರ್ಥ ಸಾಧನೆಗಾಗಿ ದಲಿತರನ್ನು ಬಳಸಿಕೊಂಡು ಅನಂತರ ಅವರನ್ನು ನಿರ್ಲಕ್ಷಿಸುವುದು ಹೊಸದೇನಲ್ಲ. ಈ ಬಗೆಯ ಹಲವು ಘಟನೆಗಳು ದಿನನಿತ್ಯ ನಡೆಯುತ್ತಲೇ ಇರುತ್ತವೆ. ಈ ಕಥೆಯಲ್ಲಿ ಬರುವ ಭೀಮ್ಯ ಎಂಬ ಹುಡುಗ ಒಳ್ಳೆಯ ಹಾಡುಗಾರ ಇವನ ಪ್ರತಿಭೆಯನ್ನೇ ತನ್ನ ಚುನಾವಣಾ ಲಾಭಕ್ಕಾಗಿ ಬಾಲಪ್ಪಗೌಡ ಬಳಸಿಕೊಳ್ಳುತ್ತಾನೆ. ಭೀಮ್ಯಾನ ಅಜ್ಜಿಗೆ ಹಣದ ಆಸೆ ತೋರಿಸಿ ಅವನಿಗೆ ಒಳ್ಳೆಯ ಎರಡು ಜೊತೆ ಬಟ್ಟೆ ಕೊಡಿಸಿ ತನ್ನ ಚುನಾವಣಾ ಪ್ರಚಾರಕ್ಕೆ ಬಳಸಿಕೊಳ್ಳುತ್ತಾನೆ. ಒಮ್ಮೆ ಆಕಸ್ಮಿಕವಾಗಿ ಟ್ರ್ಯಾಕ್ಟರ್‌ನ ಗಾಲಿಗೆ ಬಿದ್ದು ಕಾಲು ಮುರಿದು ಹೋಗುತ್ತದೆ. ಬಾಲಪ್ಪ ಗೌಡನ ಕಡೆಯವರು ಆರಂಭದಲ್ಲಿ ಆಸ್ಪತ್ರೆಗೆ ಸೇರಿಸಿ ಅನಂತರ ಆ ಕಡೆ ತಲೆ ಸಹ ಹಾಕುವುದಿಲ್ಲ. ಕೊನೆಗೆ ಅಜ್ಜಿಯೇ ಅಲ್ಲಿ ಇಲ್ಲಿ ಸಾಲ ಮಾಡಿ ಮೊಮ್ಮಗನನ್ನು ಮನೆಗೆ ಕರೆದುಕೊಂಡು ಬರುತ್ತಾಳೆ. ಈ ವಿಷಯ ತಿಳಿದ ವಿರೋಧ ಪಕ್ಷಗಳೂ ಸಹ ಈ ದಲಿತ ಹುಡುಗನಿಗೆ ಆದ ಅನ್ಯಾಯದ ವಿರುದ್ಧ ನ್ಯಾಯ ಕೊಡಿಸುವ ಭರವಸೆ ನೀಡಿ, ಕೊನೆಗೆ ಅವರು ತಮ್ಮ ಎದುರಾಳಿಯನ್ನು ಚುನಾವಣೆಯಲ್ಲಿ ಸದೆಬಡೆಯುವ ಉದ್ದೇಶದಿಂದ ಆ ಹುಡುಗನನ್ನು ತಮ್ಮ ಸ್ವಾರ್ಥ ರಾಜಕೀಯಕ್ಕೆ ಬಳಸಿಕೊಳ್ಳುವರು. ಯಾರಿಂದಲೂ ತನಗಾದ ಅನ್ಯಾಯಕ್ಕೆ ನ್ಯಾಯ ಸಿಗದೇ ಹಾಡುಗಾರ ಭೀಮ್ಯಾ, ಕುಂಟ ಭೀಮ್ಯಾ ಆಗಿ ಹೊಟ್ಟೆಪಾಡಿಗೆ ಸಣ್ಣದೊಂದು ಗೂಡಂಗಡಿಯನ್ನು ನಡೆಸುವನು. ಅಜ್ಜಿಗೆ ತನ್ನ ಮೊಮ್ಮಗ ಓದಿ ಸೈನ್ಯ ಸೇರಿ ಕೈತುಂಬ ಸಂಬಳ ತರುವ ಅಧಿಕಾರಿಯಾಗುತ್ತಾನೆ ಎಂಬ ಆಸೆ ಕನಸಾಗಿಯೇ ಉಳಿಯುತ್ತದೆ. ಭೀಮ್ಯಾನ ಸ್ಥಾನದಲ್ಲಿ ಮೇಲ್ವರ್ಗದ ಹುಡುಗನಿದ್ದಿದ್ದರೆ ಈ ಕಥೆಯ ಸ್ವರೂಪವೇ ಬದಲಾಗುತ್ತಿತ್ತು. ಭೀಮ್ಯ ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ, ಯಾವ ಬಲವೂ ಇಲ್ಲದವನು. ಆದ್ದರಿಂದ ಇವನಿಗೆ ಆದ ಶೋಷಣೆಗಳಿಗೆ ಯಾವುದೇ ಪರಿಹಾರ ದೊರೆಯುವುದಿಲ್ಲ.

ಚುನಾವಣೆಯ ಸಂದರ್ಭದಲ್ಲಿ ರಾಜಕೀಯ ನಾಯಕರು ಸುಳ್ಳು ಭರವಸೆ ಆಶ್ವಾಸನೆಗಳಿಂದ ಜನರನ್ನು ವಂಚಿಸುವುದು ಸಾಮಾನ್ಯವಾಗಿದೆ. ಅದರ ಜೊತೆಗೆ ಏನೂ ಅರಿಯದ ಇಂಥ ಮುಗ್ಧ, ಬಡ, ದಲಿತರನ್ನು ವಂಚಿಸುವುದು ಇನ್ನೂ ದುರಂತ. ದಲಿತರು ಸಣ್ಣ ಸಣ್ಣ ಆಸೆ ಆಮಿಷಗಳಿಗೆ ಒಳಗಾಗಿ ತಮ್ಮ ಬದುಕನ್ನು ನಾಶ ಮಾಡಿಕೊಳ್ಳುವುದನ್ನು ಈ ಕಥೆಯಲ್ಲಿ ವ್ಯಕ್ತಪಡಿಸಲಾಗಿದೆ. ಸಂವಿಧಾನ, ಪ್ರಜಾಪ್ರಭುತ್ವ ವ್ಯವಸ್ಥೆಗೆ ದಾರಿ ಮಾಡಿಕೊಟ್ಟಿದೆ. ಪ್ರಜೆಗಳಿಂದ ಆರಿಸಿ ಬರುವ ಪ್ರತಿನಿಧಿಗಳು ಸಂವಿಧಾನದ ಆಶಯಗಳಿಗೆ ಬದ್ಧವಾಗಿ ಕಾರ್ಯನಿರ್ವಹಿಸದೆ, ಬಡ ಮುಗ್ದ ಜನತೆಯನ್ನು ಕಿತ್ತು ತಿನ್ನುವ ರಣಹದ್ದುಗಳಾಗಿ ಕಾಡುತ್ತಿದ್ದಾರೆ ಎಂಬುದನ್ನು ಈ ಕಥೆ ಸೂಕ್ಷ್ಮವಾಗಿ ವ್ಯಕ್ತಪಡಿಸಿದೆ.

'ಹಾದರ ಕಾಯಕದ ಪುಣ್ಯಸ್ತ್ರೀ' ಕಥೆಯು ವರ್ತಮಾನದ ಹಲವು ಜ್ವಲಂತ ಸಮಸ್ಯೆಗಳಿಗೆ ಹಿಡಿದ ಕೈಗನ್ನಡಿಯಾಗಿದೆ. ದಲಿತ ಕುಟುಂಬವೊಂದು ತಮ್ಮಲ್ಲಿರುವ ಸ್ವಲ್ಪ ಭೂಮಿಯಲ್ಲಿ ಕೊಳವೆಭಾವಿಯನ್ನು ಹಾಕಿಸಿ ತೋಟ ಮಾಡಿ ನಾಲ್ಕು ಜನರಂತೆ ಬದುಕು ಕಟ್ಟಿಕೊಳ್ಳುವ ಮಹಾದಾಸೆಯನ್ನು

ಇಟ್ಟುಕೊಂಡಿರುತ್ತದೆ. ತಿಪ್ಪನೆಂಬ ದಲಿತ ವ್ಯಕ್ತಿಯೊಬ್ಬ ಒಡವೆ, ದನ, ಕರು, ಕೂಲಿಯಿಂದ ಸಂಪಾದಿಸಿದ ಹಣ, ಜೊತೆಗೆ ಸಾಲ ಸೂಲ ಮಾಡಿ ಬೋರ್ವೆಲ್ ಕೊರೆಸಿ ನೀರಾವರಿ ಶುರು ಮಾಡುತ್ತಾನೆ. ಅವನ ಅದೃಷ್ಟ ಕೆಟ್ಟು ಬೋರ್ವೆಲ್ ಹಾಳಾಗುತ್ತದೆ. ಅದನ್ನು ಮತ್ತೆ ಸರಿ ಮಾಡಿಸಲು ಊರ ಸಾಹುಕಾರರ ಹತ್ತಿರ ಜಮೀನು ಅಡಮಾನ ಇಟ್ಟು ಪ್ರಯತ್ನಿಸುತ್ತಾನೆ. ಆದರೂ ಅವನ ಪ್ರಯತ್ನಕ್ಕೆ ಫಲ ಸಿಗುವುದಿಲ್ಲ. ಸಾಲಗಾರನಾದ ತಿಪ್ಪ ಹೊಲದಲ್ಲಿ ಬೆಳೆಗಳಿಗೆ ಹೊಡೆಯುವ ಔಷಧಿ ಸೇವಿಸಿ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಇಂದು ವಿವಿಧ ಕಾರಣಗಳಿಗೆ ರೈತರ ಆತ್ಮಹತ್ಯೆಗಳು ದಿನನಿತ್ಯ ನಡೆಯುತ್ತವೆ. ಸಾಲದ ಬಾಧೆ, ಬರಗಾಲ ಮುಂತಾದವುಗಳು ರೈತರ ಆತ್ಮಹತ್ಯೆಗೆ ಮುಖ್ಯ ಕಾರಣಗಳು. ಅವುಗಳನ್ನು ಕಥೆಯಲ್ಲಿ ಗುರುತಿಸಲಾಗಿದೆ. ಇದರ ನಂತರದ ಭಾಗದಲ್ಲಿ ತಿಪ್ಪನ ಕುಟುಂಬ ಸಾಹುಕಾರನ ಸಾಲ ತೀರಿಸಿ ಜಮೀನು ಬಿಡಿಸಿಕೊಳ್ಳುವ ಉದ್ದೇಶದಿಂದ ದುಡಿಯಲು ಮುಂಬೈ ನಗರದ ಕಡೆ ವಲಸೆ ಹೋಗುವರು. ಅಲ್ಲಿ ಅಕ್ಕವ್ವ ಒಬ್ಬ ಮೇಸ್ತ್ರೀಯ ಕುತಂತ್ರಕ್ಕೆ ಬಲಿಯಾಗಿ ವೇಶ್ಯೆಯಾಗಿ ಮುಂಬೈನ ಕೆಂಪು ದೀಪದ ದಂಧೆಗೆ ಮಾರಾಟವಾಗುವ ಕರುಣಾಜನಕ ಕಥೆಯನ್ನು ಹೃದಯಸ್ಪರ್ಶಿಯಾಗಿ ಕಟ್ಟಿಕೊಡಲಾಗಿದೆ. ಹಲವು ಬಡ ದಲಿತ ಹೆಣ್ಣು ಮಕ್ಕಳು, ನಗರಗಳಲ್ಲಿ ವೇಶ್ಯೆಯಾಗಿ ಬದುಕುವುದಕ್ಕೆ ಈ ರೀತಿಯ ಹಲವು ಕಾರಣಗಳಿರುತ್ತವೆ ಎಂಬುದನ್ನು ಕಥೆ ವ್ಯಕ್ತಪಡಿಸಿದೆ. ಜಾತಿವ್ಯವಸ್ಥೆಯ ಕರಾಳ ಮುಖವನ್ನು ಸಹ ಇಲ್ಲಿ ಕಾಣಬಹುದು. ತಿಪ್ಪನ ಬೋರ್ವೆಲ್‌ನಲ್ಲಿ ಗಂಗೆ ಉಕ್ಕಿದಾಗ ಗಂಗಾಜಲವನ್ನು ಊರಿನ ಎಲ್ಲಾ ದೇವರುಗಳಿಗೆ ಅರ್ಪಿಸಲು ಮುಂದಾದಾಗ ದಲಿತ ದೇವರುಗಳು ಮಾತ್ರ ತಿಪ್ಪನ ಗಂಗಾಜಲದಲ್ಲಿ ಮಿಂದು ಏಳುತ್ತವೆ. ತಿಪ್ಪನ ಹೊಲದ ಗಂಗೆ ಮೇಲ್ವರ್ಗದ ದೈವಗಳಿಗೆ ಸೋಕದೆ ಆ ದೇವಾಲಯಗಳ ಮೆಟ್ಟಿಲುಗಳನ್ನು ತೊಳೆಯುತ್ತವೆ. ಇದು ಈ ನೆಲದಲ್ಲಿ ಜಾತಿವ್ಯವಸ್ಥೆ ಇನ್ನೂ ಜೀವಂತವಾಗಿರುವುದರ ಪ್ರತೀಕ. ಮಾನವರನ್ನು ಹುಟ್ಟಿನ ಜಾತಿಯಿಂದ ಗುರುತಿಸಲಾಗುತ್ತದೆ. ಪ್ರಕೃತಿಯನ್ನು ನೆಲ, ಜಲ, ಅಗ್ನಿಗಳನ್ನು ಜಾತಿಯಿಂದ ವಿಂಗಡಿಸುವುದು ಎಷ್ಟರ ಮಟ್ಟಿಗೆ ಸರಿ ಎಂಬುದನ್ನೂ ಇಲ್ಲಿ ಪ್ರಶ್ನಿಸಲಾಗಿದೆ. ಒಟ್ಟಿನಲ್ಲಿ ಹಾಲಗೇರಿ ಅವರು ಹಲವು ಸಮಕಾಲಿನ ಸಮಸ್ಯೆಗಳನ್ನು ಈ ಕಥೆಯಲ್ಲಿ ತೆರೆದಿಡುವ ಪ್ರಯತ್ನ ಮಾಡಿದ್ದಾರೆ.

ಭಾಗವ್ವ ಕಥೆಯೂ ಸಹ ವಿವಾಹದ ನಂತರದ ಅನೈತಿಕ ಸಂಬಂಧ ಕುರಿತು ಜಾತಿ ವ್ಯವಸ್ಥೆ ಕುರಿತು ಮಾತನಾಡುತ್ತದೆ. ಭಾಗವ್ವ ಕುರುಬ ಜಾತಿಗೆ ಸೇರಿದ ಹೆಣ್ಣು ಮಗಳು. ಮೂಕ ಗಂಡನೊಂದಿಗೆ ಇರುವ ಸ್ವಲ್ಪ ಜಮೀನಿನಲ್ಲಿ ಮೂರು ಹೆಣ್ಣು ಮಕ್ಕಳೊಂದಿಗೆ ಸಂಸಾರ ಮಾಡಿಕೊಂಡಿದ್ದಳು. ಪಕ್ಕದ ಹೊಲದ ಲಿಂಗಾಯತ ಶಿವಪ್ಪನ ಕಣ್ಣು ಈ ಭಾಗವ್ವನ ಮೇಲೆ ಬಿದ್ದು, ತನ್ನ ತಂತ್ರಗಾರಿಕೆಯಿಂದ ಅವಳನ್ನು ತನ್ನ ವಶ ಮಾಡಿಕೊಳ್ಳುವನು. ಇದರಿಂದ ಕುರುಬ ಜಾತಿಯವರು ಭಾಗವ್ವನನ್ನು ಜಾತಿಯಿಂದ ಹೊರಗಿಡುವವರು. ವೀರಶೈವರು ಇದನ್ನು ತಮ್ಮ ಜಾತಿಯ ಪ್ರತಿಷ್ಠೆಯಾಗಿ ನೋಡುವರು. ಗ್ರಾಮೀಣ ಭಾಗದಲ್ಲಿ ಇದು ಸಾಮಾನ್ಯ ವಿಷಯ. ಮೇಲ್ಜಾತಿಯವರು ಸಾಮಾಜಿಕವಾಗಿ ತಮಗಿಂತ ಕೆಳಸ್ಥರದಲ್ಲಿರುವ ಹೆಣ್ಣು ಮಕ್ಕಳನ್ನು ಅವರ ಬಡತನ, ಅಸಹಾಯಕತೆ ಅವರ ದೌರ್ಬಲ್ಯಗಳನ್ನು ಬಳಸಿಕೊಂಡು ಹಣ, ಒಡವೆ ಮುಂತಾದ ಆಮಿಷಗಳನ್ನು ನೀಡಿ ಅವರನ್ನು ತಮ್ಮ ಸ್ವಾರ್ಥಕ್ಕಾಗಿ ಬಳಸಿಕೊಳ್ಳುತ್ತಾರೆ. ಹಾಗೆಯೇ ಭಾಗವ್ವನು ಕೂಡ ಶಿವಪ್ಪನ ಯಾವುದೋ ಆಮಿಷಕ್ಕೆ ಒಳಗಾಗಿ ಅವನೊಂದಿಗೆ ಸಂಬಂಧ ಬೆಳೆಸುವಳು. ಇದು ಅವಳ ಕುಟುಂಬದ ಮೇಲೆ ಅತ್ಯಂತ ಕೆಟ್ಟ ಪರಿಣಾಮ ಬೀರುವುದು. ಶಾಲೆಗೆ ಹೋಗುವ ಅವಳ ಹೆಣ್ಣು ಮಕ್ಕಳೂ ಸಹ ಸಾಕಷ್ಟು ಭಾರಿ ಇದರಿಂದ ಅನುಮಾನಕ್ಕೆ ಒಳಗಾಗಬೇಕಾಗುವುದು. ಮದುವೆ ವಯಸ್ಸಿಗೆ ಬಂದರೂ ಸಹ ಅವರು ಸಮಾಜದಿಂದ ಬಹಿಷ್ಕಾರಗೊಂಡಿದ್ದರಿಂದ ಅವರ ಮನೆಗೆ ಯಾವ

ಗಂಡುಗಳೂ ಸುಳಿಯುವುದಿಲ್ಲ. ಭಾಗವ್ವನ ಹಿರಿಯ ಮಗಳಲ್ಲಿ ಕಥಾನಾಯಕ ಆಕರ್ಷಿತನಾಗುತ್ತಾನೆ. ಅವನು ನೌಕರಿ ಪಡೆದ ನಂತರವೂ ತನ್ನ ಕುಟುಂಬದ ಅಪ್ಪಣೆಯನ್ನು ಮೀರಿ ಅವಳನ್ನು ವಿವಾಹವಾಗಲು ಬಯಸುವುದು ಹಾಲಗೇರಿಯವರ ಪ್ರಗತಿಪರ ನಿಲುವಾಗಿದೆ. ಕಥೆ ಹದಿಹರೆಯದವರ ಯೌವ್ವನ ಸಹಜ ಬದುಕುಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಚಿತ್ರಿಸಿದೆ. ಅದರ ಜೊತೆಗೆ ಗ್ರಾಮೀಣ ಭಾಗದಲ್ಲಿ ನಡೆಯುವ ವಿವಾಹದ ನಂತರದ ಗಂಡು–ಹೆಣ್ಣಿನ ಸಂಬಂಧವನ್ನು ಕುರಿತು ವಿವರಿಸುತ್ತದೆ. ಭಾಗವ್ವ ಶಿವಪ್ಪ ವಿವಾಹೇತರ ಸಂಬಂಧ ಹೊಂದಿದ್ದರೂ ಸಹ ಸತಿಪತಿಗಳಂತೆ ಬದುಕುತ್ತಾರೆ. ಇವರ ಈ ಪ್ರೇಮದ ವಿಷಯ ಗೊತ್ತಿದ್ದರೂ ಆರಂಭದಲ್ಲಿ ತನ್ನ ವರ್ತನೆಗಳಿಂದ ಪ್ರತಿಭಟಿಸಿದ ಮೂಕಪ್ಪ ನಂತರ ಅವರ ಸಂಬಂಧವನ್ನು ಒಪ್ಪಿಕೊಳ್ಳುವುದು ಅವನ ಅಸಹಾಯಕತೆಯನ್ನು ವ್ಯಕ್ತಪಡಿಸುತ್ತದೆ. ಕಥೆ ಗ್ರಾಮೀಣ ಸಮಾಜದ ಹಲವು ಮಗ್ಗಲುಗಳನ್ನು ನಮಗೆ ಪರಿಚಯಿಸುತ್ತದೆ. ಕಥೆಗಳನ್ನು ಓದಿದಾಗ ಮೂಕಪ್ಪನ ಅಸಹಾಯಕತೆಯನ್ನು ಕಂಡು ಕರುಳು ಮರುಗುತ್ತದೆ, ಭಾಗವ್ವನ ನೆಲೆಯಲ್ಲಿ ನೋಡಿದಾಗ ಭಾಗವ್ವನದ್ದು ಸರಿಯಾದ ನಿರ್ಧಾರವಾಗುತ್ತದೆ. ಮೂಕಪ್ಪ ಅಂಗವಿಕಲನಾಗಿದ್ದರಿಂದ ಭಾಗವ್ವಳ ಎಲ್ಲ ಭಾವನೆಗಳಿಗೆ ಸ್ಪಂದಿಸಲಾರ. ಭಾಗವ್ವ ಯಾವುದೋ ಕಾರಣಕ್ಕಾಗಿ ಅಂಗವಿಕಲನನ್ನು ಮದುವೆಯಾಗಿರುವುದು ಇಲ್ಲಿ ಸ್ಪಷ್ಟ. ಭಾಗವ್ವನ ಅತೃಪ್ತ ಬಯಕೆಗಳನ್ನು ಅರ್ಥಮಾಡಿಕೊಂಡ ಶಿವಪ್ಪ ಅವಳಿಗೆ ಜೊತೆಯಾಗಯತ್ತಾನೆ. ಆಗ ಭಾಗವ್ವಳು ಸಹಜವಾಗಿಯೇ ಶಿವಪ್ಪನಿಗೆ ಮನಸೋಲುತ್ತಾಳೆ. ಶಿವಪ್ಪ ಭಾಗವ್ವಳನ್ನು ಕೊನೆಯವರೆಗೂ ಸತಿಯಾಗಿ ನಡೆಸಿಕೊಳ್ಳುತ್ತಾನೆ. ಹಾಗೆಯೇ ಭಾಗವ್ವಳೂ ಸಹ ತನ್ನನ್ನು ತಾನು ಶಿವಪ್ಪನಿಗೆ ಅರ್ಪಿಸಿಕೊಳ್ಳುತ್ತಾಳೆ. ಕಥೆಯ ಕೊನೆಯಲ್ಲಿ ಶಿವಜ್ಜನ ಸಾವಿನ ನಂತರ ಮೂಕಪ್ಪ ಶಿವಜ್ಜನ ಫೋಟೋ ತಂದು ತನ್ನ ಮನೆಯ ಗೋಡೆಗೆ ಹಾಕಿ ಪೂಜಿಸುವುದು ತನ್ನ ಅಸಹಾಯಕತೆಗಿಂತಲೂ ತನ್ನ ಅಸಮರ್ಥತೆಯನ್ನು ಒಪ್ಪಿಕೊಂಡಂತೆ. ಶಿವಜ್ಜ ತನ್ನ ಅಸಮರ್ಥತೆಯನ್ನು ನಿವಾರಿಸಿ ತನ್ನ ಕುಟುಂಬಕ್ಕೆ ಎಲ್ಲದನ್ನೂ ಒದಗಿಸುವವನು ಎನ್ನುವ ಕೃತಜ್ಞತಾ ಭಾವವು ಇಲ್ಲಿ ವ್ಯಕ್ತವಾಗಿದೆ.

ಮಠದ ಹೋರಿ ಕಥೆಯು ಈ ಸಂಕಲನದ ಅತ್ಯಂತ ಸ್ವಾರಸ್ಯವಾದ ಕಥಾವಸ್ತುವನ್ನು ಹೊಂದಿದೆ. ಮಠದ ಹೋರಿಯೊಂದು ಆತ್ಮಕತೆಯ ರೂಪದಲ್ಲಿ ತನ್ನ ನೋವು, ಸಂಕಟ ಬದುಕಿನ ವಿವಿಧ ಮಜಲುಗಳನ್ನು ಹಂಚಿಕೊಳ್ಳುವಂತೆ ಕಥೆಯನ್ನು ಹೆಣೆಯಲಾಗಿದೆ. ಹಾಲಗೇರಿಯವರು ತಮ್ಮ ಕಾಲ್ಪನಿಕ ಚಿಂತನೆಗಳಿಂದ ಹೋರಿ ತನ್ನ ಬದುಕಿನ ದುರಂತ ಕಥನಗಳನ್ನು ಅತ್ಯಂತ ಕರುಣಾಜನಕವಾಗಿ ನಿವೇದಿಸಿಕೊಳ್ಳುವಂತೆ ನಿರೂಪಿಸುವ ಪ್ರಯತ್ನ ಮಾಡಿದ್ದಾರೆ. ಹೋರಿಯೊಂದು ಕೆಲವು ಹಸುಗಳು ವಯಸ್ಸಾದ ಕಾರಣಕ್ಕೆ ಮಠದಿಂದಲೇ ಕಸಾಯಿ ಖಾನೆಗೆ ಮಾರಾಟವಾಗುವ ಪ್ರಸಂಗ ಬರುತ್ತದೆ. ಮಾರಾಟವಾದ ಜಾನುವಾರುಗಳು ತಮ್ಮ ಬದುಕಿನ ದುರಂತ ಕಥೆಗಳನ್ನು ಹಂಚಿಕೊಳ್ಳುತ್ತಾ ಹೋಗುತ್ತಾರೆ. ಗ್ರಾಮೀಣ ಭಾಗದಲ್ಲಿ ಇಂದಿಗೂ ಹಸುಗಳನ್ನು, ಹೋರಿಗಳನ್ನು ದೇವರ ಹೆಸರಿನಲ್ಲಿ ಬಸವನಾಗಿ ಬಿಡುವ ಪರಿಪಾಠವಿದೆ. ಈ ರೀತಿಯ ಬಸವ, ಹಸುಗಳಿಗೆ ಗ್ರಾಮದಲ್ಲಿ ಯಾವುದೇ ನಿರ್ಬಂಧಗಳು ಇರುವುದಿಲ್ಲ. ಈ ಬಸವಗಳನ್ನು ದೈವ ಸ್ವರೂಪಿಯಾಗಿಯೇ ಗ್ರಾಮೀಣರು ಆರಾಧಿಸುತ್ತಾರೆ. ಇವುಗಳ ಸಂಖ್ಯೆ ಹೆಚ್ಚಾದಾಗ ದೇವರ ಹೆಸರಿನಲ್ಲಿ ಹರಾಜು ಹಾಕುತ್ತಾರೆ. ಇವು ದಷ್ಟಪುಷ್ಟವಾಗಿರುವುದರಿಂದ ಹರಾಜಿನಲ್ಲಿ ಶ್ರೀಮಂತರು ಹೆಚ್ಚು ಬೆಲೆ ಕೊಟ್ಟು ಕೊಂಡು ವ್ಯವಸಾಯಕ್ಕೆ ಬಳಸಿಕೊಳ್ಳುವಂತಹ ಸಾಂಸ್ಕೃತಿಕ ಆಚರಣೆಗಳು ಕಥೆ ಹೇಳುತ್ತವಾದರೂ ನಂತರ ಅವುಗಳ ಖಾಸಗಿ ಬದುಕಿನ ವಿಷಯದಲ್ಲಿ ತಿರುಗುತ್ತದೆ. ದೇವರಿಗೆ ಬಿಡುವ ಹಸುಗಳಿಗೆ ಹೆಚ್ಚು

ಸ್ವಾತಂತ್ರ್ಯವಿದ್ದರೂ ಮನೆಗಳಲ್ಲಿರುವ ಹಸುಗಳಿಗೆ ಅವುಗಳ ವೈಯಕ್ತಿಕ ಸ್ವಾತಂತ್ರ್ಯ ಕಿತ್ತು ಸಾಕುವ ಪ್ರಾಣಿ ಎಂಬ ಹಣೆಪಟ್ಟಿಯಿಂದ ಅವುಗಳಲ್ಲಿ ಸ್ವಾತಂತ್ರ್ಯ ಕಿತ್ತುಕೊಂಡು ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳುವುದನ್ನು ಕಥೆ ಸೂಕ್ಷ್ಮವಾಗಿ ಅಭಿವ್ಯಕ್ತಿಸಿದೆ.

ಮಠಗಳಲ್ಲಿರುವ ಗೋಶಾಲೆಗಳು ಗೋಶಾಲೆಗಳಿಂದ ದೇಶಿ ಹಸುಗಳ ಸಂತಾನವೃದ್ಧಿ, ಅಲ್ಲಿನ ಸ್ವಾಮಿಗಳಿಗೂ ಗೋವುಳಿಗೂ ಇರುವ ಅವಿನಾಭಾವಯತೆಗಳನ್ನು ಕಥೆಯಲ್ಲಿ ಚಿತ್ರಿಸಲಾಗಿದೆ. ಅಲ್ಲಿಂದ ವಯಸ್ಸಾದ ನಂತರ ವಿವಿಧ ಸಂಸ್ಥೆಗಳು ನಿರ್ವಹಿಸುವ ಗೋ ಸಂರಕ್ಷಣಾ ಶಾಲೆಗೆ ಬರುತ್ತವೆ. ಅಲ್ಲಿ ಗೋವುಗಳನ್ನು ನೋಡಿಕೊಳ್ಳುವ ವಿಧಾನಗಳು, ಅಲ್ಲಿನ ಆಹಾರ ಕ್ರಮ, ಹಾಲು ಕರೆಯುವ ಉಪಯೋಗಕ್ಕೆ ಬರುವ ಹಸುಗಳಿಗೆ ಸಿಗುವ ಪ್ರಾತಿನಿಧ್ಯ ಉಪಯೋಗಕ್ಕೆ ಬಾರದ ಗೋವುಗಳನ್ನು ನೋಡಿಕೊಳ್ಳುವ ರೀತಿಗಳನ್ನು ವ್ಯಂಗ್ಯವಾಗಿ ಚಿತ್ರಿಸಲಾಗಿದೆ. ಗೋವುಗಳು ಎಮ್ಮೆಗಳು ಎರಡೂ ಸಹ ಪೌಷ್ಟಿಕಯುಕ್ತ ಹಾಲನ್ನು ಕೊಡುತ್ತವೆ. ಆದರೆ ಸಾಂಸ್ಕೃತಿಕ ಹಾಗೂ ಧಾರ್ಮಿಕ ವಲಯಗಳಲ್ಲಿ ಗೋವುಗಳಿಗೆ ಸಿಕ್ಕ ಸ್ಥಾನಮಾನ ಎಮ್ಮೆಗಳಿಗೆ ಸಿಗುವುದಿಲ್ಲ. ಮಠಗಳಲ್ಲಿ, ಗೋಶಾಲೆಗಳಲ್ಲಿ ಎಮ್ಮೆಗಳಿಗೆ ಬಹುತೇಕ ಪ್ರವೇಶವಿರುವುದಿಲ್ಲ. ಕಸಾಯಿ ಖಾನೆಗೆ ಹೋಗುವ ಗೋವುಗಳನ್ನು ರಕ್ಷಿಸುವ ಗೋರಕ್ಷಕರು ಜೊತೆಯೇ ಇರುವ ಎಮ್ಮೆಗಳನ್ನು ರಕ್ಷಿಸುವುದಿಲ್ಲ. ಹಾಲನ್ನು ಭೂಲೋಕದ ಅಮೃತ ಎನ್ನಲಾಗುವುದು. ಈ ಅಮೃತವನ್ನು ಕರೆಯುವ ಗೋವು ಹಾಗೂ ಎಮ್ಮೆಗಳಲ್ಲಿಯೇ ಈ ರೀತಿಯ ತಾರತಮ್ಯಗಳು ಇರುವುದನ್ನು ಈ ಕತೆಯಲ್ಲಿ ಚರ್ಚಿಸಲಾಗಿದೆ.

ಹಾಲಗೇರಿ ಅವರು ಇಂದು ಅಭಿವೃದ್ಧಿಯ ಹೆಸರಿನಲ್ಲಿ ಗ್ರಾಮ, ಸಮುದಾಯಗಳು ಹೇಗೆ ಆಧುನೀಕರಣಗೊಳ್ಳುತ್ತಿವೆ, ಆ ಮೂಲಕ ಅಲ್ಲಿನ ಸಾಂಸ್ಕೃತಿಕ ಬದುಕು, ಬದುಕಿನ ಮೌಲ್ಯಗಳು ಹೇಗೆ ನಾಶಗೊಳ್ಳುತ್ತಿವೆ ಎಂಬುದನ್ನು 'ಕಾಂಕ್ರೀಟ್ ಮೊಟ್ಟೆಯ ಹಕ್ಕಿಗಳು' 'ಬೆಂಕಿ ಉಗುಳುವ ಪಂಕ' ಕಥೆಗಳು ಪ್ರಸ್ತುತಪಡಿಸಿವೆ. ಕಾಂಕ್ರೀಟ್ ಹಕ್ಕಿಯ ಮೊಟ್ಟೆಗಳು ಇಂದಿನ ರಿಯಲ್ ಎಸ್ಟೇಟ್‌ನ ಕರಾಳ ಮುಖವನ್ನು, ಅದರಿಂದ ಕಾಂಕ್ರೀಟ್ ಗೂಡುಗಳಾಗುತ್ತಿರುವ ಗ್ರಾಮೀಣ ಪರಿಸರದ ಬದುಕಿನ ಚಿತ್ರಣವನ್ನು ಕಟ್ಟಿದೆ. ಈ ಕಥೆಯಲ್ಲಿ ಬರುವ ಶ್ರಮಜೀವಿ ಕಲ್ಲಜ್ಜನು ತನ್ನ ಜಮೀನು, ಬಂಡವಾಳಶಾಹಿ ವ್ಯವಸ್ಥೆಯ ಕೈವಶವಾಗುವುದನ್ನು ವಿರೋಧಿಸುವನು. ಕಲ್ಲಜ್ಜ ಅವನ ತಂದೆ ಯಮುನಪ್ಪ ತಾಯಿ ತುಳುಸಮ್ಮರ ಹತ್ತಾರು ವರ್ಷದ ಶ್ರಮದ ಫಲ ಊರ ಹತ್ತಿರವಿರುವ ಮೂರು ಎಕರೆ ಭೂಮಿ. ಯಮುನಪ್ಪ ಊರ ಗೌಡರ ಮನೆಯಲ್ಲಿ ಸಾಯುವ ಕಾಲದವರೆಗೆ ಜೀತ ಮಾಡಿ ಹಣ ಕೂಡಿಸುವನು. ತುಳಸಮ್ಮ ಕೂಲಿನಾಲಿ ಮಾಡಿ, ಕಲ್ಲಜ್ಜ ಕುರಿ ಸಾಕಿ ಹಣವನ್ನು ಸಂಪಾದಿಸಿ ಭೂಮಿ ಕೊಳ್ಳುವರು. ತಮ್ಮ ಪೂರ್ವಜರ ಭೂಮಿಯ ಕನಸನ್ನು ಇವರು ಈಡೇರಿಸುವರು. ಭೂರಹಿತ ದಲಿತ ಕುಟುಂಬವನ್ನು ಭೂ ಒಡೆತನ ಸಂಪಾದಿಸುವ ಬಗೆಯನ್ನು ಇಲ್ಲಿ ಗಮನಿಸಬಹುದು. ಕಾಲ ಕಳೆದಂತೆ ಆಧುನಿಕತೆ ಗ್ರಾಮಗಳಿಗೂ ಕಾಲಿಟ್ಟಾಗ, ಗ್ರಾಮ ಸಮುದಾಯಗಳು ಅದರ ಕಬಂಧ ಬಾಹುಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಬಂಡವಾಳಶಾಹಿಯನ್ನು ಪೋಷಿಸುವ ಸರ್ಕಾರ, ಆ ಹಳ್ಳಿಯಲ್ಲಿ ಕಾರ್ಖಾನೆ ಸ್ಥಾಪಿಸುವುದಾಗಿ ಹೇಳಿ ರೈತರು ತಮ್ಮ ಜಮೀನನ್ನು ಸರ್ಕಾರಕ್ಕೆ ಕೊಡುವ ಪರಿಹಾರ ತೆಗೆದುಕೊಂಡು ಸರ್ಕಾರಕ್ಕೆ ಮಾರುವಂತೆ ಒತ್ತಾಯ ಹೇರತೊಡಗುವರು. ರಿಯಲ್ ಎಸ್ಟೇಟ್‌ನ ಮಧ್ಯವರ್ತಿಗಳು ಗ್ರಾಮಕ್ಕೆ ಲಗ್ಗೆ ಇಟ್ಟರು. ಶಾಂತಿಯಿಂದ ಇದ್ದ ಗ್ರಾಮ ಎರಡು ಭಾಗವಾಗುವುದು. ಇದು ಇಂದಿನ ಎಲ್ಲಾ ಹಳ್ಳಿಗಳ ಸ್ಥಿತಿಯೂ ಹೌದು. ಒಂದು ಬಣ ಕಾರ್ಖಾನೆಯನ್ನು ವಿರೋಧಿಸಿದರೆ, ಮತ್ತೊಂದು ಬಣ ಸ್ವಾಗತಿಸಿತು. ಪ್ರಗತಿಪರರು ಪರಿಸರವಾದಿಗಳು ಕಾರ್ಖಾನೆ ತೆರೆಯುವುದನ್ನು ವಿರೋಧಿಸುವರು. ಊರ ಗೌಡರು ರಾಜಕೀಯ ವ್ಯಕ್ತಿಗಳು ಮಠಾಧೀಶರು ವಿರೋಧಿಸಿ

ಪ್ರತಿಭಟನೆಯಲ್ಲಿ ಪಾಲ್ಗೊಂಡರು. ಮಾಧ್ಯಮಗಳು ಇದನ್ನು ರಾಜ್ಯ ಸುದ್ದಿಯಾಗಿ ಪ್ರಕಟಿಸಿ ಹೋರಾಟಕ್ಕೆ ಕಾವು ಕೊಟ್ಟರು. ಕೆಲ ದಿನಗಳ ನಂತರ ರಾಜಕೀಯ ಮುಖಂಡರು, ಮಠಾಧೀಶರು ಕಾರ್ಖಾನೆಯ ಸ್ಥಾಪನೆಯನ್ನು ಮಧ್ಯವರ್ತಿಗಳ ವಿವಿಧ ಆಮಿಷಗಳಿಗೆ ಒಳಗಾಗಿ ಪ್ರತಿಭಟನೆಯನ್ನು ಹಿಂಪಡೆಯವರು. ಮಾಧ್ಯಮದವರು ಅಲ್ಲಿಂದ ಕಾಲ್ಕಿತ್ತರು. ಗ್ರಾಮಸ್ಥರೆಲ್ಲರೂ ರಾಜಕೀಯ ಮುಖಂಡರ ಮಾತಿಗೆ ಮರುಳಾಗಿ ಭೂಮಿ ಮಾರಲು ಸಿದ್ಧರಾದರು. ಆದರೆ ಕಲ್ಲಜ್ಜನ ಒಳಸಂಕಟ ಹೇಳತೀರದು. ಆ ಭೂಮಿ ಪಡೆಯಲು ತನ್ನ ತಂದೆ,–ತಾಯಿ, ತಾನು ಮಾಡಿದ ತ್ಯಾಗ ಕಷ್ಟಗಳು ಕಣ್ಣ ಮುಂದೆ ಬಂದು ಗಾಂಧಿಯವರ ಉಪವಾಸ ಸತ್ಯಾಗ್ರಹದ ಅಸ್ತ್ರ ಹಿಡಿದು ಕಲ್ಲಜ್ಜ ಒಬ್ಬನೇ ಹೋರಾಟಕ್ಕೆ ಇಳಿಯುವನು. ತನ್ನ ವಂಶ ಒಳ್ಳೆಯ ಕೃಷಿ ಕುಟುಂಬವಾಗಲಿ ಎಂಬ ಕನಸು ಕಟ್ಟಿದ ಕಲ್ಲಜನಿಗೆ ಮಕ್ಕಳು ಸಹಕರಿಸಲಿಲ್ಲ. ಅವರು ಕೃಷಿ ತ್ಯಜಿಸಿ ನಗರ ಸೇರಿದ್ದರು. ಕೊನೆಗೆ ಊರ ಮುಖಂಡರು ಕಲ್ಲಜ್ಜನ ಮಕ್ಕಳಿಗೆ ಹಣದ ಆಮಿಷ ನೀಡಿ ಭೂಮಿ ಪಡೆಯುವರು. ಕಲ್ಲಜ್ಜ ಹೆಂಡತಿಯೊಂದಿಗೆ ನಗರದ ಮಗನ ಮನೆಗೆ ಸೇರಿದರು. ಭೂಮಿ ಹೋದ ಕೊರಗಿನಿಂದ ಹೆಂಡತಿಯ ಸಾವು ಕಲ್ಲಜ್ಜನನ್ನು ಮಾನಸಿಕವಾಗಿ ಇನ್ನಷ್ಟು ಕುಗ್ಗಿಸಿತು. ಕೊನೆಗೆ ತನ್ನ ಹಳ್ಳಿಗೆ ಬಂದ. ಹಳ್ಳಿ ಸಾಕಷ್ಟು ಬದಲಾಗಿತ್ತು, ಗಿಡಮರಗಳಿಂದ ಕಂಗೊಳಿಸುತ್ತಿದ್ದ ತಮ್ಮ ಕೃಷಿ ಭೂಮಿಯಲ್ಲಿ ದೊಡ್ಡ ದೊಡ್ಡ ಕಾಂಕ್ರೀಟ್ ಕಟ್ಟಡಗಳು ತಲೆ ಎತ್ತಿ ಗ್ರಾಮದ ಸ್ವರೂಪವೇ ಬದಲಾಗಿದೆ.

ತಾನು ಭೂಮಿ ಕೊಟ್ಟ ಕಾರ್ಖಾನೆಯಲ್ಲಿ ತನಗೇ ಕೆಲಸ ದೊರೆಯದಾಗುತ್ತದೆ. ಈ ಕಥೆ ಇಂದಿನ ರೈತರನ್ನು ಸರ್ಕಾರ, ರಾಜಕೀಯ ನಾಯಕರು, ಮಠಾಧೀಶರು, ಬಂಡವಾಳಶಾಹಿ ವ್ಯವಸ್ಥೆಯ ಮಧ್ಯವರ್ತಿಗಳು ಹೇಗೆ ವಂಚಿಸುತ್ತಿದ್ದಾರೆ ಎಂಬುದನ್ನು ಅನಾವರಣಗೊಳಿಸುತ್ತದೆ. ಇಂದು ಕೃಷಿ ಭೂಮಿಗಳೆಲ್ಲಾ ಕಾಂಕ್ರೀಟ್ ಕಟ್ಟಡಗಳಾಗಿ ಬದಲಾಗುತ್ತಿವೆ. ಅಭಿವೃದ್ಧಿಯ ಹೆಸರಿನಲ್ಲಿ ಸರ್ಕಾರಗಳು ವಿದೇಶಿ ಕಂಪನಿಗಳಿಗೆ ನಮ್ಮ ರೈತರ ಕೃಷಿ ಭೂಮಿಯನ್ನು ಬಲಿಕೊಡುತ್ತಿವೆ. ಒಂದು ಭೂಮಿಯನ್ನು ಕೊಳ್ಳುವ ಒಂದು ಇಡೀ ಕುಟುಂಬ ಎಷ್ಟು ತ್ಯಾಗ ಮಾಡಿರುತ್ತದೆ. ಆದರೆ ಬಂಡವಾಳಶಾಹಿ ವ್ಯವಸ್ಥೆ ಸುಲಭದಲ್ಲಿ ಈ ಶ್ರಮವನ್ನು ನುಂಗಿಬಿಡುತ್ತದೆ. ಇಲ್ಲಿ ಶೋಷಣೆಗೆ ಒಳಗಾಗುವುದು ರೈತರೇ ಆಗಿರುತ್ತಾರೆ. ಇಂದು ಕೃಷಿಯಲ್ಲಿ ತೊಡಗಿಕೊಳ್ಳುವರ ಸಂಖ್ಯೆಯೇ ತೀರಾ ವಿರಳ. ಅಭಿವೃದ್ಧಿಯ ನೆಪದಲ್ಲಿ ಕೃಷಿ ಭೂಮಿಯನ್ನು ಕಸಿದುಕೊಂಡರೆ ರೈತರು ಇನ್ಯಾವ ಉದ್ಯೋಗವನ್ನು ಮಾಡಬೇಕಾಗುತ್ತದೆ.

ಇದೇ ರೀತಿ ಭೂವಂಚಿತರಾಗಿ ತಮ್ಮ ನೆಲೆಯನ್ನು ಕಳೆದುಕೊಳ್ಳುವ ಬುಡಕಟ್ಟು ಸಮುದಾಯಗಳ ಸಂವೇದನೆಗಳನ್ನು 'ಬೆಂಕಿ ಉಗುಳುವ ಪಂಕ' ಎಂಬ ಕಥೆಯೂ ನಿರೂಪಿಸಿದೆ. ಗುಡ್ಡದ ತಪ್ಪಲಿನಲ್ಲಿ ಪಶುಪಾಲನೆಯನ್ನು ವೃತ್ತಿಯಾಗಿ ಹೊಂದಿರುವ ಗೌಳಿಗರ ಸಮುದಾಯ, ಅಭಿವೃದ್ಧಿಯ ಹೆಸರಿನಲ್ಲಿ ಸರ್ಕಾರಗಳು ಕೈಗೊಳ್ಳುವ ವಿವಿಧ ಯೋಜನೆಗಳಿಗೆ ಬಲಿಯಾಗುವುದು ಈ ಕಥೆಯ ಕೇಂದ್ರವಾಗಿದೆ. ಇದರೊಂದಿಗೆ ಆ ಸಮುದಾಯಗಳ ತಲತಲಾಂತರದಿಂದ ಬಂದ ಪೂರ್ವಿಕರ ಬದುಕು ಅವರ ನಂಬಿಕೆ, ಸಂಸ್ಕೃತಿಗಳು ಆಧುನಿಕತೆಯ ಸುಳಿಗೆ ಸಿಲುಕಿ ನಾಶವಾಗುವುದನ್ನು ಈ ಕಥೆಯು ಧ್ವನಿಸುತ್ತದೆ. ತಮ್ಮ ಪಾಡಿಗೆ ತಾವು ಗುಡ್ಡದ ತಪ್ಪಲಿನಲ್ಲಿ ಪಶುಪಾಲನೆ ಮಾಡುತ್ತಾ ಹಾಲಿನ ಮಾರಾಟದಿಂದ ಬರುವ ಆದಾಯದಲ್ಲಿ ಬದುಕು ಕಟ್ಟಿಕೊಂಡ ಬುಡಕಟ್ಟು ಗೌಳಿಗರದ್ದಾಗಿದೆ. ಇವರಿಂದ ಗುಡ್ಡಕ್ಕೆ ಆಗಲಿ, ಪರಿಸರಕ್ಕೆ ಆಗಲಿ ಯಾವ ರೀತಿಯ ತೊಂದರೆಯೂ ಆಗಿರುವುದಿಲ್ಲ. ಅವರ ನೆಮ್ಮದಿಯ ಬದುಕನ್ನು ನಾಗರಿಕ ಸಮಾಜದ ಹಿತಾಸಕ್ತಿಗೆ ಬಲಿ ಕೊಡಲಾಗುವುದು. ನಾಗರಿಕ ಸಮಾಜ ವೈಭವದ ಜೀವನಕ್ಕೆ, ಉದ್ಯಮಿಗಳ ಕೈಗಾರಿಕೆಗಳಿಗೆ, ಬಂಡವಾಳಶಾಯಿ ವ್ಯವಸ್ಥೆಗಳ ಸ್ವಹಿತಾಸಕ್ತಿಗೆ ಇಂಥ ಎಷ್ಟೋ ಬುಡಕಟ್ಟುಗಳ ಸಾಂಸ್ಕೃತಿಕ ಬದುಕು

ನಾಶಹೊಂದಿವೆ. ನಾಗರಿಕ ಜೀವನದ ಯಾವ ಗಂಧಗಾಳಿಯು ಇಲ್ಲದ ಮುಗ್ಧ ಬುಡಕಟ್ಟುಗಳ ಬದುಕು ಆಧುನಿಕತೆಯ ಪ್ರವೇಶದಿಂದ ಹೇಗೆ ಛಿದ್ರಗೊಂಡಿವೆ ಎಂಬುದನ್ನು ಹಾಲಗೇರಿಯವರು ಇಲ್ಲಿ ಗುರುತಿಸಿದ್ದಾರೆ. ತಮ್ಮ ಮೂಲ ನೆಲೆಯನ್ನು ಬಿಟ್ಟು ಬಂದ ಈ ಬುಡಕಟ್ಟುಗಳು, ನಾಗರಿಕ ಸಮಾಜಗಳಲ್ಲಿ ತಮ್ಮ ಬದುಕನ್ನು ಕಟ್ಟಿಕೊಳ್ಳಲು ಹೆಣಗಾಡುತ್ತವೆ. ಇಂಥ ಮುಗ್ಧ ಬುಡಕಟ್ಟುಗಳನ್ನು ಒಕ್ಕಲೆಬ್ಬಿಸಿ ಗಾಳೀ ಯಂತ್ರಗಳನ್ನು ಸರ್ಕಾರ ಆ ಗುಡ್ಡದಲ್ಲಿ ನಿರ್ಮಿಸುತ್ತದೆ. ಹಲವು ತಲೆಮಾರುಗಳ ಸಾಂಸ್ಕೃತಿಕ ಬದುಕು ಈ ಅಭಿವೃದ್ಧಿ ಯೋಜನೆಗಳಿಂದ ಕೊನೆಗೊಳ್ಳುವುದನ್ನು ಇಲ್ಲಿ ಗ್ರಹಿಸಬಹುದು.

ಹನುಮಂತ ಹಾಲಗೇರಿಯವರು ಅಂತಕರಣವುಳ್ಳ ಮಾನವೀಯ ಕತೆಗಾರರು. ಅವರ ಹಲವು ಕಥೆಗಳು ಮಾನವೀಯತೆಯ ನೆಲೆಗಟ್ಟಿನಲ್ಲಿಯೇ ರೂಪಗೊಂಡಿವೆ. ಹಾಲಗೇರಿಯವರು ಪ್ರಸ್ತುತದಲ್ಲಿ ಹೊಸ ಶತಮಾನದ ಹಲವು ಸಂವೇದನೆಗಳಿಗೆ ಸಾಹಿತ್ಯದ ಮೂಲಕ ಸ್ಪಂದಿಸಿದ್ದಾರೆ. ಇಂದು ಬುಡಕಟ್ಟು, ದಲಿತ, ಮಹಿಳಾ, ರೈತ ಸಮುದಾಯಗಳು ಹೇಗೆ ಶೋಷಣೆಗಳಿಗೆ ಒಳಗಾಗುತ್ತಿವೆ ಎಂಬುದನ್ನು ತಮ್ಮ ಕಥೆಗಳಲ್ಲಿ ಚಿತ್ರಿಸಿದ್ದಾರೆ. ಇದರ ಜೊತೆಗೆ ಆಧುನಿಕತೆ, ಸರ್ಕಾರದ ಯೋಜನೆಗಳು ನಮ್ಮ ಸಾಂಸ್ಕೃತಿಕ ಬದುಕಿನ ಮೇಲೆ ಬೀರುವ ಪ್ರಭಾವವನ್ನು ಗುರುತಿಸಿದ್ದಾರೆ. ವಿದ್ಯಾವಂತ ಸಮುದಾಯಗಳು ತಮ್ಮದೆ ಸಮುದಾಯಗಳನ್ನು ತಮ್ಮ ಸ್ವಹಿತಾಸಕ್ತಿಗಳಿಗೆ ಹೇಗೆ ಬಲಿಕೊಡುತ್ತಿವೆ ಎಂಬುದನ್ನು ವಿಮರ್ಶಾತ್ಮಕ ನೆಲೆಯಲ್ಲಿ ವ್ಯಕ್ತಪಡಿಸಿದ್ದಾರೆ. 21ನೇ ಶತಮಾನದ ಸಂವೇದನೆಗಳು ಕಳೆದ ಶತಮಾನದ ಸಂವೇದನೆಗಳಿಗಿಂತ ಬಿನ್ನ ಸ್ವರೂಪದಲ್ಲಿ ವ್ಯಕ್ತಗೊಂಡಿವೆ.

**ಆಕರ ಗ್ರಂಥ**


- ಹನುಮಂತ ಹಾಲಗೇರಿ. (2013). *ಮಠದ ಹೋರಿ.* ಸಹಜ ಪುಸ್ತಕ ಪ್ರಕಾಶನ.